# कर्णाटक-संस्कृत-विश्वविद्यालयः

श्री चामराजेन्द्र संस्कृत महाविद्यालयस्य परिसरः, पम्पमहाकविमार्गः, चामराजपेटे, बेङ्गलूरु - ५६० ०१८.

दूरवाणी: ०८०-२६७० १३०३; ई-सङ्केतः karnatakasanskrituniversity@gmail.com / csnaikarksu@gmail.com

## KARNATAKA SAMSKRIT UNIVERSITY

Sri Chamarajendra Samskrit College Campus, Pampamahakavi Road, Chamarajpete, Bangalore - 560 018

Phone: 080-2670 1303; Mobile: 94483 74772. e-mail: csnaikarksu@gmail.com / karnatakasanskrituniversity@gmail.com

**Dr. Chandramouli S. Naikar**

**Registrar**


ಸಂಖ್ಯೆ: ಕಸಂವಿ/29/ಪ್ರಶಿಪಸ/2011-12 /300

ದಿನಾಂಕ: 26.05.2011

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್ತು ಸಮಿತಿಯ ಮೊದಲನೇ ಸಭೆಯು ದಿನಾಂಕ 21.05.2011ರಂದು ಬೆಳಿಗ್ಗೆ 11.00 ಗಂಟೆಗೆ ವಿಶ್ವವಿದ್ಯಾಲಯದ ಕಛೇರಿಯಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಮಾನ್ಯ ಕುಲಪತಿಗಳು ವಹಿಸಿದ್ದರು. ಆದಿನ ನಡೆದ ಸಭೆಯ ನಡಾವಳಿಯನ್ನು ನಿಮ್ಮ ಅವಗಾಹನೆಗೆ ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

Naikar

ಕುಲಸಚಿವರು

ಇವರಿಗೆ,

1. **ಸರ್ಕಾರದ ಪ್ರಧಾನ ಕಾರ್ಯದರ್ಶಿ,** ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), 6ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು-560001.
2. **ಸರ್ಕಾರದ ಪ್ರಧಾನ ಕಾರ್ಯದರ್ಶಿ,** ಹಣಕಾಸು ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ವಿಧಾನಸೌಧ, ಬೆಂಗಳೂರು-560001.
3. **ಸರ್ಕಾರದ ಕಾರ್ಯದರ್ಶಿ,** ಧಾರ್ಮಿಕ ದತ್ತಿ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು-560001.
4. **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಅರಮನೆ ಆವರಣ, ಮೈಸೂರು.
5. **ನಿರ್ದೇಶಕರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-560002.
6. **ವಿದ್ವಾನ್ ಸಿ. ನಂಜುಂಡಯ್ಯ,** ಪ್ರಾಚಾರ್ಯರು, ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ ಆಗಮ ಕಾಲೇಜು, ಶ್ರೀ ಆದಿಚುಂಚನಗಿರಿ ಕ್ಷೇತ್ರ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ - 571811
7. **ವಿದ್ವಾನ್ ಹರಿದಾಸ ಭಟ್ಟ,** ಪ್ರಾಚಾರ್ಯರು, ಪೂರ್ಣಪ್ರಜ್ಞ ಸಂಸ್ಕೃತ ಕಾಲೇಜು, ಪೂರ್ಣಪ್ರಜ್ಞ ನಗರ, ಕತ್ತರಿಗುಪ್ಪೆ ಮುಖ್ಯರಸ್ತೆ, ಬೆಂಗಳೂರು-560028.
8. **ವಿದ್ವಾನ್ ಡಿ.ಎಸ್. ಚಂದ್ರಶೇಖರಯ್ಯ,** ಪ್ರಾಚಾರ್ಯರು, ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಕಾಲೇಜು, ಶ್ರೀ ಸಿದ್ಧಗಂಗಾ ಮಠ, ತುಮಕೂರು ಜಿಲ್ಲೆ - 572104
9. **ವಿದ್ವಾನ್ ಸುರೇಶ್ ಆಚಾರ್ಯ,** ಪ್ರಾಚಾರ್ಯರು, ಎಸ್.ಎಂ.ಎಸ್.ಪಿ. ಸಂಸ್ಕೃತ ಕಾಲೇಜು, ಉಡುಪಿ-576101.
10. **ವಿದ್ವಾನ್ ವಿಶ್ವೇಶ್ವರ ಗೋಪಾಲ ಹೆಗಡೆ,** ಪ್ರಾಚಾರ್ಯರು, ಶ್ರೀ ರಾಘವೇಂದ್ರ ಭಾರತೀ ಸವೇದ ಸಂಸ್ಕೃತ ಕಾಲೇಜು, ಸುಬ್ರಹ್ಮಣ್ಯ ಸುರಕಟ್ಟೆ, ಹೊನ್ನಾವರ - 581334. ಉ.ಕ. ಜಿಲ್ಲೆ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು ಆವರಣ, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560 018, ದೂರವಾಣಿ: 080-26701303

## ೨೧.೦೫.೨೦೧೧ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ ೧ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್ತು ಸಮಿತಿಯ ೧ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮೇ ೨೧, ೨೦೧೧ರ ಶನಿವಾರದಂದು ಬೆಳಿಗ್ಗೆ ೧೧.೦೦ ಗಂಟೆಗೆ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

ಹಾಜರಿದ್ದವರು:

| | | |
|---|---|---|
| ೧. | ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | ಸರ್ಕಾರದ ಉಪ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೩. | ಸರ್ಕಾರದ ಉಪ ಕಾರ್ಯದರ್ಶಿ, ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೪. | ವಿದ್ವಾನ್ ಡಿ.ಎಸ್. ಚಂದ್ರಶೇಖರಯ್ಯ, ತುಮಕೂರು | ಸದಸ್ಯರು |
| ೫. | ವಿದ್ವಾನ್ ಸಿ. ನಂಜುಂಡಯ್ಯ, ಆದಿಚುಂಚನಗಿರಿ | ಸದಸ್ಯರು |
| ೬. | ವಿದ್ವಾನ್ ಹರಿದಾಸ ಭಟ್ಟ, ಬೆಂಗಳೂರು | ಸದಸ್ಯರು |
| ೭. | ವಿದ್ವಾನ್ ವಿಶ್ವೇಶ್ವರ ಗೋಪಾಲ ಹೆಗಡೆ, ಹೊನ್ನಾವರ | ಸದಸ್ಯರು |
| ೮. | ವಿದ್ವಾನ್ ಸುರೇಶ್ ಆಚಾರ್ಯ, ಉಡುಪಿ | ಸದಸ್ಯರು |
| ೯. | ಡಾ. ಚಂದ್ರಮೌಳಿ ಎಸ್. ನಾಯ್ಕರ, ಕುಲಸಚಿವರು | ಸದಸ್ಯ ಕಾರ್ಯದರ್ಶಿ |

ಗೈರುಹಾಜರಿ:

| | | |
|---|---|---|
| ೧. | ಸರ್ಕಾರದ ಕಾರ್ಯದರ್ಶಿ, ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು | ಸದಸ್ಯರು |
| ೨. | ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೩. | ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |

ಸಭೆಯ ಪ್ರಾರಂಭಕ್ಕೆ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

**ವಿಷಯ೧:** ೨೦೧೦-೧೧ನೇ ಸಾಲಿನ ವಿದ್ವನ್ಮಧ್ಯಮಾ (ಬಿ.ಎ.) ಹಾಗೂ ವಿದ್ವದುತ್ತಮಾ (ಎಂ.ಎ.) ಫಲಿತಾಂಶದ ಬಗೆಗೆ.

**ಟಿಪ್ಪಣಿ:** ೨೦೧೦-೧೧ನೇ ಸಾಲಿನ ಸಂಸ್ಕೃತ ಪ್ರಥಮಾ, ಕಾವ್ಯ, ಸಾಹಿತ್ಯ ಪ್ರಸಿದ್ಧ ಪರೀಕ್ಷೆಗಳ ಫಲಿತಾಂಶಗಳನ್ನು ಸಭೆಯು ಪರಿಶೀಲಿಸಿತು. ಪ್ರಥಮಾ ಪರೀಕ್ಷೆಗೆ ೧೦,೨೬೩ ವಿದ್ಯಾರ್ಥಿಗಳು ಹಾಜರಿದ್ದು, ೯,೦೭೪ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಕಾವ್ಯ ಪರೀಕ್ಷೆಯಲ್ಲಿ ೪,೨೧೨ ವಿದ್ಯಾರ್ಥಿಗಳು ಕುಳಿತಿದ್ದು, ೩,೬೧೪ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಸಾಹಿತ್ಯ ಪರೀಕ್ಷೆಗೆ ೭೦೦ ವಿದ್ಯಾರ್ಥಿಗಳು ಕುಳಿತಿದ್ದು, ೪೭೦ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಶೇಕಡಾವಾರು ಉತ್ತಮ ಫಲಿತಾಂಶಗಳು ಬಂದಿವೆ. ೨೦೧೦-೧೧ನೇ ಸಾಲಿನಲ್ಲಿ ವೇದ ಪ್ರಥಮಾ, ಪ್ರವೇಶ ಮತ್ತು ಮೂಲ ಪರೀಕ್ಷೆಗಳ ಫಲಿತಾಂಶವನ್ನು ಸಭೆಯು ಪರಿಶೀಲಿಸಿತು. ವೇದ ಪ್ರಥಮಾ ಪರೀಕ್ಷೆಗೆ ೫೬೩ ವಿದ್ಯಾರ್ಥಿಗಳು ಹಾಜರಿದ್ದು, ೫೪೩ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ವೇದ ಪ್ರವೇಶಕ್ಕೆ ೨೨೨ ವಿದ್ಯಾರ್ಥಿಗಳು ಹಾಜರಿದ್ದು, ೨೧೮ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ವೇದ ಮೂಲಕ್ಕೆ ೧೦೨ ವಿದ್ಯಾರ್ಥಿಗಳು ಹಾಜರಿದ್ದು, ೧೦೦ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಶೇಕಡಾವಾರು ಅತ್ಯುತ್ತಮ ಫಲಿತಾಂಶ ಬಂದಿರುವುದನ್ನು ಸಭೆಯು ಗಮನಿಸಿ ಹರ್ಷಿಸಿತು. ೨೦೧೦-೧೧ನೇ ಸಾಲಿನ ಶಾಸ್ತ್ರ ಮತ್ತು ವೇದ ಪ್ರಸಿದ್ಧ ಪರೀಕ್ಷೆಗಳಿಗೆ ವಿದ್ಯಾರ್ಥಿಗಳು ಕುಳಿತಿದ್ದರು. ವಿದ್ವನ್ಮಧ್ಯಮಾ ೩೪೨ ವಿದ್ಯಾರ್ಥಿಗಳು ಕುಳಿತಿದ್ದು, ೧೪೧ ಉತ್ತೀರ್ಣರಾಗಿದ್ದಾರೆ. ವಿದ್ವದುತ್ತಮಾ ೧೭೧ ವಿದ್ಯಾರ್ಥಿಗಳು ಕುಳಿತಿದ್ದು, ೧೩೫ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಸಭೆಯ ಸದಸ್ಯರು ವಿದ್ವನ್ಮಧ್ಯಮಾ ಪರೀಕ್ಷೆಯಲ್ಲಿ ಶೇಕಡಾವಾರು ಫಲಿತಾಂಶ ಕಡಿಮೆ ಬಂದಿರುವುದನ್ನು ಗಮನಿಸಿ, ಉಳಿದಂತೆ ಮೆಚ್ಚುಗೆಯನ್ನು ಸೂಚಿಸಿದರು.

**ನಿರ್ಣಯ:** ಮೇಲ್ಕಂಡ ಅಂಶಗಳನ್ನು ಸಭೆಯು ಪರಿಶೀಲಿಸಿ ತನ್ನ ಅನುಮೋದನೆಯನ್ನು ನೀಡಿತು.

**ವಿಷಯ೨:** ೨೦೧೦-೧೧ನೇ ಸಾಲಿನ ವಿದ್ವದುತ್ತಮಾ (ಎಂ.ಎ.) ಪರೀಕ್ಷೆಯಲ್ಲಿ ಒಂದೊಂದು ಶಾಸ್ತ್ರಗಳಲ್ಲಿ ಸರ್ವಪ್ರಥಮ ಸ್ಥಾನ ಪಡೆದಿರುವವರಿಗೆ ಪುರಸ್ಕಾರ ನೀಡುವ ಬಗೆಗೆ.

**ಟಿಪ್ಪಣಿ:** ೨೦೧೧ನೇ ಸಾಲಿನಲ್ಲಿ ನಡೆದ ವಿದ್ವದುತ್ತಮಾ ಶಾಸ್ತ್ರ ಹಾಗೂ ವೇದ ಪರೀಕ್ಷೆಗಳ ಒಂದೊಂದು ಶಾಸ್ತ್ರ ವಿಭಾಗಗಳಲ್ಲಿ ಸರ್ವೋನ್ನತ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ಮತ್ತು ೫೦೦೦/- (ಐದು ಸಾವಿರ ರೂಪಾಯಿ) ನಗದು ಪುರಸ್ಕಾರ ನೀಡುವ ಬಗೆಗೆ ಸಭೆಯು ಸುದೀರ್ಘವಾಗಿ ಚರ್ಚಿಸಿತು. ಈಗ ವಿಶ್ವವಿದ್ಯಾಲಯವು ಹೊಸದಾಗಿ

ಪ್ರಾರಂಭವಾಗಿದೆ. ಘಟಕೀಯ ಹಾಗೂ ಮಾನ್ಯತೆ ಪಡೆದ ಕಾಲೇಜುಗಳಿಗೆ ಪ್ರೋತ್ಸಾಹ ನೀಡುವ ಉದ್ದೇಶ ಹೊಂದಿರುವುದರಿಂ ಆಯಾಯಾ ಶಾಸ್ತ್ರ ಭಾಗಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ಪ್ರಸ್ತುತ ಪ್ರಸ್ತಾವನೆಯನ್ನು ಸಭೆಯ ಮುಂದೆ ಮಾನ್ಯ ಕುಲಪತಿಗಳು ಮಂಡಿಸಿದರು. ಬಹು ದೀರ್ಘಕಾಲ ಚರ್ಚೆ ನಡೆದು ಆಯಾಯಾ ಶಾಸ್ತ್ರ ಭಾಗಗಳಲ್ಲಿ ಕನಿಷ್ಠ ೫೦ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ಹಾಗೂ ೫೦೦೦/– ರೂ.ಗಳ ನಗದು ರೂಪದ ಪುರಸ್ಕಾರವನ್ನು ನೀಡಬಹುದೆಂದು ಸಭೆ ಚರ್ಚಿಸಿತು.

ನಿರ್ಣಯ: **ಮೇಲ್ಕಂಡ ಅಂಶಗಳಿಗೆ ಸಭೆಯು ಒಮ್ಮತದಿಂದ ತನ್ನ ಅನುಮೋದನೆಯನ್ನು ನೀಡಿತು.**

ವಿಷಯ ೩: **ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು ಮತ್ತು ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜುಗಳನ್ನು ವಿಶ್ವವಿದ್ಯಾಲಯದ ಘಟಕೀಯ ಕಾಲೇಜು ಆಗಿರುವುದರ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸರ್ಕಾರದ ನಡಾವಳಿಗಳು, ಆದೇಶ ಸಂಖ್ಯೆ ೧೭೩ ಯುಆರ್‌ಸಿ ೨೦೧೦; ದಿನಾಂಕ ೧ ಏಪ್ರಿಲ್ ೨೦೧೧ರ ತೀರ್ಮಾನದಂತೆ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬೆಂಗಳೂರು ಮತ್ತು ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು –ಇವೆರಡನ್ನೂ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಘಟಕ ಕಾಲೇಜನ್ನಾಗಿ ವರ್ಗಾಯಿಸಿರುವ ಹಿನ್ನೆಲೆಯಲ್ಲಿ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಮಾನ್ಯ ಕುಲಪತಿಗಳು ಸಭೆಯ ಮುಂದೆ ಮಂಡಿಸಿದರು. ಈ ಎರಡೂ ಕಾಲೇಜುಗಳಿಗೆ ಸಂಬಂಧಪಟ್ಟ ಆಸ್ತಿದಾಯಿತ್ವಗಳ ಬಗ್ಗೆ ಸಂಪೂರ್ಣ ವಿವರಗಳನ್ನು ಸಲ್ಲಿಸುವಂತೆ ೧೨.೦೫.೨೦೧೧ರಂದು ಆಯಾಯ ಕಾಲೇಜುಗಳಿಗೆ ಪತ್ರ ಬರೆದಿರುವುದನ್ನು ಸಭೆಯ ಗಮನಕ್ಕೆ ಕುಲಪತಿಗಳು ತಂದರು. ದಿನಾಂಕ ೧೬.೦೫.೨೦೧೧ರಂದು ಎರಡೂ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಬೋಧಕೇತರ ಸಿಬ್ಬಂದಿಗಳ ಸೇವಾವಿಲೀನೀಕರಣದ ಬಗೆಗೆ ಪತ್ರ ಬರೆಯಲಾಗಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು.

ನಿರ್ಣಯ: **ಮೇಲ್ಕಂಡ ಅಂಶಗಳನ್ನು ಚರ್ಚಿಸಿ ಸಭೆಯು ಒಮ್ಮತದಿಂದ ತನ್ನ ಅನುಮೋದನೆಯನ್ನು ನೀಡಿತು.**

ವಿಷಯ ೪: **೨೦೧೧–೧೨ನೇ ಸಾಲಿನಲ್ಲಿ ಹೊಸದಾಗಿ ಕಾಲೇಜುಗಳನ್ನು ಮಾನ್ಯತೆ ನೀಡುವ ಬಗೆಗೆ.**

ಟಿಪ್ಪಣಿ: ಈಗ ವಿಶ್ವವಿದ್ಯಾಲಯದ ಅಡಿಯಲ್ಲಿ ಒಟ್ಟು ೧೭ ಕಾಲೇಜುಗಳು ಶೈಕ್ಷಣಿಕ ವ್ಯಾಪ್ತಿಯಲ್ಲಿ ಬಂದಿವೆ. ಅವುಗಳಿಗೆ ೨೦೧೦–೧೧ನೇ ಸಾಲಿನಲ್ಲಿ ಪರೀಕ್ಷೆಗಳನ್ನು ನಡೆಸಲಾಗಿದೆ. ಅವುಗಳಿಗೆ ವಿಶ್ವವಿದ್ಯಾಲಯವು ಹೊಸದಾಗಿ ಮಾನ್ಯತೆ ನೀಡಬೇಕಾಗಿದೆ. ೨೦೧೧–೧೨ನೇ ಸಾಲಿನಲ್ಲಿ ಕೆಲವು ಆಡಳಿತ ಮಂಡಳಿ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಸಂಪೂರ್ಣ ಮಾಹಿತಿ ನೀಡಿ ಹೊಸದಾಗಿ ಅನುದಾನರಹಿತ ಮಾನ್ಯತೆ ನೀಡಬೇಕೆಂದು ಕೋರಿರುತ್ತಾರೆ. **ಜನಸೇವಾ ವಿಶ್ವಸ್ತ ಮಂಡಳಿ, ಚನ್ನೇನಹಳ್ಳಿ, ಮಾಗಡಿ ರಸ್ತೆ, ಬೆಂಗಳೂರು** –ಇವರು ಸಲ್ಲಿಸಿರುವ ಅರ್ಜಿಯನ್ನು ಸಭೆಯ ಗಮನಕ್ಕೆ ಕುಲಸಚಿವರು ತಂದರು. ಈ ಸಂಬಂಧವಾಗಿ ಸದಸ್ಯರು ಚರ್ಚಿಸಿದರು. ಮಾನ್ಯ ಕುಲಪತಿಗಳು ಘಟನೋತ್ತರವಾಗಿ ರಚಿಸಿರುವ ಮಾನ್ಯತಾ ಸಮಿತಿಯ ವಿವರಗಳನ್ನು ಪರಿಶೀಲಿಸಿತು.

ನಿರ್ಣಯ: **ಮೇಲ್ಕಂಡ ಅಂಶಕ್ಕೆ ಸಭೆಯು ತನ್ನ ಅನುಮೋದನೆಯನ್ನು ನೀಡಿತು.**

ವಿಷಯ ೫: **೨೦೧೧–೧೨ನೇ ಸಾಲಿನಲ್ಲಿ ವಿದ್ವನ್ಮಧ್ಯಮಾ ಹಾಗೂ ವಿದ್ವದುತ್ತಮಾ ತರಗತಿಗಳಿಗೆ 'ಅಧ್ಯಯನ ಮಂಡಳಿ' ರಚಿಸುವ ಬಗೆಗೆ.**

ಟಿಪ್ಪಣಿ: ೨೦೧೧–೧೨ನೇ ಸಾಲಿನಲ್ಲಿ ತರಗತಿಗಳು ಆರಂಭವಾಗಬೇಕಾಗಿವೆ. ವಿದ್ವನ್ಮಧ್ಯಮಾ ಮೂರು ವರ್ಷಗಳಿಗೂ ವಿದ್ವದುತ್ತಮಾ ಎರಡು ವರ್ಷಗಳಿಗೂ ಪ್ರಸಿದ್ಧ ಪರೀಕ್ಷೆಗಳನ್ನು ನಡೆಸುವುದು ಅಗತ್ಯವೆಂದು ಸಭೆ ಚರ್ಚಿಸಿತು. ಈ ಹಿನ್ನೆಲೆಯಲ್ಲಿ ವಿದ್ವಾಂಸರನ್ನು ಒಳಗೊಂಡ ಅಧ್ಯಯನ ಮಂಡಳಿಯನ್ನು ರಚಿಸಿತು.

| | | | | |
|---|---|---|---|---|
| I. | ಅಲಂಕಾರಶಾಸ್ತ್ರ | ೧. ವಿದ್ವಾನ್ ಎಚ್.ಎಂ. ನರಸಿಂಹಮೂರ್ತಿ | ಅಧ್ಯಕ್ಷರು | ಆದಿಚುಂಚನಗಿರಿ |
| | | ೨. ವಿದ್ವಾನ್ ಡಾ. ಎನ್. ಲಕ್ಷ್ಮೀನಾರಾಯಣಭಟ್ಟ | ಸದಸ್ಯರು | ಉಡುಪಿ |
| | | ೩. ವಿದ್ವಾನ್ ಎ.ಎಂ. ಚಂದ್ರಶೇಖರ್ | ಸದಸ್ಯರು | ಮೈಸೂರು |
| | | ೪. ವಿದ್ವಾನ್ ಎ. ಗುರುಪ್ರಸಾದ್ | ಸದಸ್ಯರು | ಬೆಂಗಳೂರು |
| II. | ವ್ಯಾಕರಣಶಾಸ್ತ್ರ | ೧. ವಿದ್ವಾನ್ ಸೋ.ತಿ. ನಾಗರಾಜ | ಅಧ್ಯಕ್ಷರು | ಬೆಂಗಳೂರು |
| | | ೨. ವಿದ್ವಾನ್ ಸೋ. ನರಸಿಂಹನ್ | ಸದಸ್ಯರು | ಶ್ರೀ ಸಿದ್ಧಗಂಗಾ ಕ್ಷೇತ್ರ |
| | | ೩. ವಿದ್ವಾನ್ ರಾಮಚಂದ್ರಭಟ್ಟ | ಸದಸ್ಯರು | ಉಮ್ಮಚಗಿ |
| | | ೪. ವಿದ್ವಾನ್ ಗಣೇಶ ಭಟ್ಟ | ಸದಸ್ಯರು | ಹೊನ್ನಾವರ |
| III. | ನವೀನನ್ಯಾಯ | ೧. ವಿದ್ವಾನ್ ಎ. ಹರಿದಾಸ ಭಟ್ಟ | ಅಧ್ಯಕ್ಷರು | ಬೆಂಗಳೂರು |
| | | ೨. ವಿದ್ವಾನ್ ಉಮಾಕಾಂತ ಭಟ್ಟ | ಸದಸ್ಯರು | ಮೇಲುಕೋಟೆ |
| | | ೩. ವಿದ್ವಾನ್ ರಾಧಾಕೃಷ್ಣ ಸಿ. ಶಾಸ್ತ್ರೀ | ಸದಸ್ಯರು | ಬೆಂಗಳೂರು |
| | | ೪. ವಿದ್ವಾನ್ ಗಂಗಾಧರ ವಿ. ಭಟ್ಟ | ಸದಸ್ಯರು | ಮೈಸೂರು |
| IV. | ಧರ್ಮಶಾಸ್ತ್ರ | ೧. ವಿದ್ವಾನ್ ನಾರಾಯಣ | ಅಧ್ಯಕ್ಷರು | ಮೈಸೂರು |
| | ಜ್ಯೋತಿಷ | ೨. ವಿದ್ವಾನ್ ಹರಿದಾಸ ಭಟ್ಟ ಆರ್. | ಸದಸ್ಯರು | ಉಡುಪಿ |
| | ಪೂರ್ವಮೀಮಾಂಸಾ | ೩. ವಿದ್ವಾನ್ ವೆಂಕಟರಮಣ ಹೆಗಡೆ | ಸದಸ್ಯರು | ಮೈಸೂರು |
| | | ೪. ವಿದ್ವಾನ್ ಜಿ. ಮಂಜುನಾಥ್ | ಸದಸ್ಯರು | ಮೈಸೂರು |

| | | | |
|---|---|---|---|
| ವೇದಾಂತಶಾಸ್ತ್ರ ಮತ್ತು ಜೈನಸಿದ್ಧಾಂತ | ೧. ವಿದ್ವಾನ್ ಸಂಪತ್ಕುಮಾರಾಚಾರ್ಯ | ಅಧ್ಯಕ್ಷರು | ಬೆಂಗಳೂರು |
| | ೨. ವಿದ್ವಾನ್ ತ್ರಿಪ್ರಮೂರ್ತಿ ಜಿ. ಕೂರ್ಸೆ | ಸದಸ್ಯರು | ಆದಿಚುಂಚನಗಿರಿ |
| | ೩. ವಿದ್ವಾನ್ ಜಿ.ಪಿ. ನಾಗರಾಜ್ | ಸದಸ್ಯರು | ಬೆಂಗಳೂರು |
| | ೪. ವಿದ್ವಾನ್ ಡಾ. ಕೆ.ಎಂ. ಮಹದೇವಯ್ಯ | ಸದಸ್ಯರು | ಮೈಸೂರು |
| | ೫. ವಿದ್ವಾನ್ ಎಂ.ಸಿ. ಚರಂತಿಮಠ | ಸದಸ್ಯರು | ಬೆಂಗಳೂರು |
| VI. ವೇದಗಳು | ೧. ವಿದ್ವಾನ್ ಡಾ. ಭಾಷ್ಯಂಸ್ವಾಮಿ | ಅಧ್ಯಕ್ಷರು | ಮೈಸೂರು |
| | ೨. ವಿದ್ವಾನ್ ಸುಬ್ರಾಯ ಭಟ್ಟ | ಸದಸ್ಯರು | ಗೋಕರ್ಣ |
| | ೩. ವಿದ್ವಾನ್ ಎಲ್. ನಾರಾಯಣಶರ್ಮ | ಸದಸ್ಯರು | ಬೆಂಗಳೂರು |
| | ೪. ವಿದ್ವಾನ್ ಅಶೋಕ ಶಂಕರಭಟ್ಟ ಪೂಜಾರ್ | ಸದಸ್ಯರು | ಮೈಸೂರು |

ನಿರ್ಣಯ: **ಮೇಲ್ಕಂಡ ಅಂಶಗಳಿಗೆ ಸಭೆಯು ಅನುಮೋದಿಸಿತು.**

ವಿಷಯ ೬: **ವೇದ ವಿದ್ವನ್ಮಧ್ಯಮಾ ಮತ್ತು ವೇದ ವಿದ್ವದುತ್ತಮಾ ಬಿ.ಎ. ಮತ್ತು ಎಂ.ಎ. ಸಮಾನವೆಂದು ಪರಿಗಣಿಸುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ಕೆಲವು ಕಾಲೇಜುಗಳಲ್ಲಿ ವೇದ ವಿದ್ವನ್ಮಧ್ಯಮಾ ಮತ್ತು ವೇದ ಉತ್ತಮಾ ತರಗತಿಗಳು ನಡೆಯುತ್ತಿವೆ. ಇವುಗಳನ್ನು ಇತರ ಶಾಸ್ತ್ರ ಪ್ರಕಾರಗಳಂತೆ ಬಿ.ಎ. ಮತ್ತು ಎಂ.ಎ. ಗೆ ಸಮಾನವೆಂದು ಪರಿಗಣಿಸಲು ಸಮಸ್ಯೆಗಳಿರುವುದನ್ನು ಕುಲಸಚಿವರು ಸಭೆಯ ಗಮನಕ್ಕೆ ತಂದರು. ಈ ವಿಷಯವನ್ನು ಸಭೆಯು ಚರ್ಚಿಸಿ ಉಪಸಮಿತಿಯೊಂದನ್ನು ರಚಿಸಲು ನಿರ್ಣಯಿಸಿತು.

| | |
|---|---|
| ೧. ಪಂ. ಜಯತೀರ್ಥಾಚಾರ್ಯ ವಾ. ಮಳಗಿ, ಪ್ರಶಾಸನ ಸಮಿತಿ ಸದಸ್ಯರು | ಅಧ್ಯಕ್ಷರು |
| ೨. ಪ್ರೊ. ಅಶ್ವತ್ಥಮ್ಮ, ಪ್ರಶಾಸನ ಸಮಿತಿ ಸದಸ್ಯರು | ಸದಸ್ಯರು |
| ೩. ಡಾ. ಭಾಷ್ಯಂಸ್ವಾಮಿ, ಪ್ರಾಂಶುಪಾಲರು (ಪ್ರಭಾರಿ), ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು | ಸದಸ್ಯರು |
| ೪. ವಿದ್ವಾನ್ ಸೋ.ತಿ. ನಾಗರಾಜ, ಪ್ರಾಧ್ಯಾಪಕರು, ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು | ಸದಸ್ಯರು |
| ೫. ಕುಲಸಚಿವರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ | ಸದಸ್ಯ ಕಾರ್ಯದರ್ಶಿ |

ನಿರ್ಣಯ: **ಮೇಲ್ಕಂಡ ಉಪಸಮಿತಿಯು ಆದಷ್ಟೂ ಬೇಗ ಸಭೆ ಸೇರಿ ವಿಸ್ತೃತವಾದ ವರದಿಯೊಂದನ್ನು ನೀಡಲು ಸಭೆಯು ನಿರ್ಣಯಿಸಿತು.**

ವಿಷಯ ೭: **ಘಟಕೀಯ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರ ಜ್ಯೇಷ್ಠತಾಪಟ್ಟಿಯನ್ನು ಸಿದ್ಧಪಡಿಸುವುದರ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸರ್ಕಾರದ ಸಂಖ್ಯೆ ಇಡಿ ೧೭೩ ಯುಆರ್‌ಸಿ ೨೦೧೦, ದಿನಾಂಕ: ೦೧.೦೪.೨೦೧೧ರ ಆದೇಶದಂತೆ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು ಮತ್ತು ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು ವಿಶ್ವವಿದ್ಯಾಲಯದ ಘಟಕ ಕಾಲೇಜುಗಳಾಗಿವೆ. ಈ ಕಾಲೇಜುಗಳಲ್ಲಿ ಬೋಧಕ ಸಿಬ್ಬಂದಿಗಳು ಹಲವಾರು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಈ ಎರಡೂ ಕಾಲೇಜುಗಳ ಪ್ರಾಂಶುಪಾಲರು ಪ್ರಭಾರಿಗಳಾಗಿಯೇ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಕಾಲೇಜುಗಳ ಅಧ್ಯಾಪಕರ ಸೇವಾ ಹಿರಿತನವನ್ನು ಆಧರಿಸಿ ಅಧ್ಯಾಪಕರ ಜ್ಯೇಷ್ಠತಾಪಟ್ಟಿಯನ್ನು ಸಿದ್ಧಪಡಿಸುವ ಬಗೆಗೆ ಸಮಿತಿಯೊಂದನ್ನು ರಚಿಸುವುದು ಸೂಕ್ತವೆಂದು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು. ಸಭೆಯು ಈ ಕೆಳಕಂಡಂತೆ ಉಪಸಮಿತಿಯೊಂದನ್ನು ರಚಿಸಿತು.

| | |
|---|---|
| ೧. ಪಂ. ಜಯತೀರ್ಥಾಚಾರ್ಯ ವಾ. ಮಳಗಿ, ಪ್ರಶಾಸನ ಸಮಿತಿ ಸದಸ್ಯರು | ಅಧ್ಯಕ್ಷರು |
| ೨. ಶ್ರೀ ಬಿ.ಎಸ್. ಜಾಪಾಲಿ, ಉಪ-ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ) | ಸದಸ್ಯರು |
| ೩. ಶ್ರೀ ಕೆ.ಎಸ್. ಗೋಪಾಲಕೃಷ್ಣ, ಉಪ-ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ | ಸದಸ್ಯರು |
| ೪. ಶ್ರೀ ದೇವರಾಜ್, ಅಧೀನ ಕಾರ್ಯದರ್ಶಿಗಳು, ಡಿಪಿಎಆರ್, ವಿಧಾನಸೌಧ | ಸದಸ್ಯರು |
| ೫. ಕುಲಸಚಿವರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ | ಸದಸ್ಯ ಕಾರ್ಯದರ್ಶಿ |

ನಿರ್ಣಯ: **ಮೇಲ್ಕಂಡ ಉಪಸಮಿತಿಯು ಆದಷ್ಟೂ ಬೇಗ ಸಭೆ ಸೇರಿ ಎಲ್ಲಾ ಅಂಶಗಳನ್ನು ಪರಿಶೀಲಿಸಿ ವಿಸ್ತೃತವಾದ ವರದಿಯೊಂದನ್ನು ನೀಡಲು ಸಭೆಯು ನಿರ್ಣಯಿಸಿತು.**

ವಿಷಯ ೮: **೨೦೧೦-೧೧ನೇ ಸಾಲಿನಲ್ಲಿ ಘಟಿಕೋತ್ಸವ ನಡೆಸುವುದರ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಅಧಿಕೃತವಾಗಿ ಕಾರ್ಯರೂಪಕ್ಕೆ ಬಂದ ಮೇಲೆ ಅನೇಕ ಕಾರ್ಯಯೋಜನೆಗಳನ್ನು ರೂಪಿಸಿದೆ. ೨೦೧೦-೧೧ನೇ ಸಾಲಿನಲ್ಲಿ ಪಾಠಶಾಲೆ ಹಾಗೂ ಕಾಲೇಜುಗಳ ಫಲಿತಾಂಶಗಳನ್ನು ಘೋಷಿಸಿದೆ. ವಿಶ್ವವಿದ್ಯಾಲಯದ ಹಲವು ಪರಿನಿಯಮಗಳನ್ನು ರೂಪಿಸಿದೆ. ವಿಶ್ವವಿದ್ಯಾಲಯವು ವಾರ್ತಾಪತ್ರ ಮತ್ತು ಶೋಧನಾಪತ್ರಿಕೆಯನ್ನು ರೂಪಿಸಿ ಹೊರತಂದಿದೆ. ಈ ಹಿನ್ನೆಲೆಯಲ್ಲಿ ಮುಂದಿನ ಜೂನ್ ಮೂರನೆಯ ವಾರದಲ್ಲಿ ಘಟಿಕೋತ್ಸವವನ್ನು ಆಚರಿಸುವುದು ಅಗತ್ಯವೆಂದು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು. ಆದಿನ ವಿದ್ವದುತ್ತಮಾ ಶಾಸ್ತ್ರ ಪರೀಕ್ಷೆಗಳಲ್ಲಿ ಸರ್ವಪ್ರಥಮ ಪಡೆದಿರುವವರಿಗೆ ಪ್ರಮಾಣಪತ್ರ ವಿತರಣೆ, ಗೌರವ ಡಾಕ್ಟರೇಟ್, ಘಟಿಕೋತ್ಸವ ಭಾಷಣ ಇವೇ ಮುಂತಾದ ವಿಷಯಗಳ ಕುರಿತು ಸಭೆಯ ಗಮನಕ್ಕೆ ಮಾನ್ಯ ಕುಲಪತಿಗಳು ತಂದರು. ಸಭೆಯು ಈವರೆಗೂ ಆಗಿರುವ ಪ್ರಗತಿಯನ್ನು ಹರ್ಷದಿಂದ ಸ್ವಾಗತಿಸಿತು.

ನಿರ್ಣಯ: **ಮೇಲ್ಕಂಡ ಅಂಶಕ್ಕೆ ಸಭೆಯು ತನ್ನ ಅನುಮೋದನೆಯನ್ನು ನೀಡಿದುದಲ್ಲದೆ ಆದಷ್ಟು ಬೇಗ ಘಟಿಕೋತ್ಸವ ನಡೆಸಬೇಕೆಂದು ನಿರ್ಣಯಿಸಿತು. ಈ ವಿಷಯದಲ್ಲಿ ಮಾನ್ಯ ಕುಲಪತಿಗಳು ಕ್ರಮವಹಿಸಬಹುದೆಂದು ಸೂಚಿಸಿತು.**

**ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು**

**ವಿಷಯ ೯: ಸಂಸ್ಕೃತ ಪುಸ್ತಕ ಪುರಸ್ಕಾರ ೨೦೧೦ ಯೋಜನೆಯ ಬಗೆಗೆ.**

ಟಿಪ್ಪಣಿ: ಕರ್ನಾಟಕದಲ್ಲಿ ಪ್ರತಿವರ್ಷ ವಿವಿಧ ಪ್ರಕಾರಗಳಿಗೆ ಸೇರಿದ ಸಂಸ್ಕೃತ ಪುಸ್ತಕಗಳು ಪ್ರಕಟವಾಗುತ್ತಿವೆ. ಆದರೆ ಆ ಪುಸ್ತಕಗಳಿಗೆ ಬಹುಮಾನ ಅಥವಾ ಪುರಸ್ಕಾರಗಳನ್ನು ನೀಡುವ ವ್ಯವಸ್ಥೆಯಿಲ್ಲ. ವಿಶ್ವವಿದ್ಯಾಲಯವು ಈ ನಿಟ್ಟಿನಲ್ಲಿ ಪ್ರಮುಖವಾದ ಕೆಲವು ಪ್ರಕಾರಗಳಿಗೆ ಪುಸ್ತಕ ಪುರಸ್ಕಾರ ನೀಡಬಹುದೆಂದೂ ಈ ಪ್ರಸ್ತಾವನೆಯನ್ನು ಪ್ರಸ್ತುತ ವರ್ಷದಿಂದಲೇ ಜಾರಿಗೊಳಿಸಬಹುದೆಂದೂ ಮಾನ್ಯ ಕುಲಪತಿಗಳು ಸಭೆಗೆ ಸೂಚಿಸಿದರು. ಈ ಕೆಳಕಂಡ ಪ್ರಕಾರಗಳನ್ನು ಪುರಸ್ಕಾರಕ್ಕೆ ತೆಗೆದುಕೊಳ್ಳಬಹುದೆಂದು ಸಭೆಯು ಚರ್ಚಿಸಿತು.

೧. ಕಾದಂಬರಿ ಸಾಹಿತ್ಯ
೨. ಕಥಾ ಸಾಹಿತ್ಯ
೩. ಗ್ರಂಥಸಂಪಾದನಾ ಸಾಹಿತ್ಯ
೪. ಪ್ರಬಂಧ ಸಾಹಿತ್ಯ
೫. ವಿಜ್ಞಾನ ಸಾಹಿತ್ಯ
೬. ಕಾವ್ಯ ಸಾಹಿತ್ಯ
೭. ನಾಟಕ ಸಾಹಿತ್ಯ
೮. ಶಾಸ್ತ್ರ ಸಾಹಿತ್ಯ
೯. ಅನುವಾದ ಸಾಹಿತ್ಯ
೧೦. ವಿಮರ್ಶಾ ಸಾಹಿತ್ಯ

ಮೇಲ್ಕಂಡ ಪ್ರಕಾರಗಳಲ್ಲಿ ಪ್ರತಿವರ್ಷವೂ ಪುಸ್ತಕಗಳನ್ನು ಆಹ್ವಾನಿಸಿ ಪುರಸ್ಕಾರ ನೀಡಬಹುದೆಂದೂ ಈ ಸಂಬಂಧವಾಗಿ ಉನ್ನತ ಪುಸ್ತಕ ಪುರಸ್ಕಾರ ಆಯ್ಕೆಸಮಿತಿಯೊಂದನ್ನು ರಚಿಸಬಹುದೆಂದೂ ಸಭೆಯು ಸೂಚಿಸಿತು.

**ನಿರ್ಣಯ: ಈ ಮೇಲ್ಕಂಡ ವಿಷಯವನ್ನು ಸಭೆಯು ಚರ್ಚಿಸಿತು. ಅನಂತರ ಮಾನ್ಯ ಕುಲಪತಿಗಳು ಸೂಕ್ತ ರೀತಿಯಿಂದ ಈ ಯೋಜನೆಯ ಕಾರ್ಯರೂಪಕ್ಕೆ ತಂದು ಜಾರಿಗೊಳಿಸಿ ನಿರ್ವಹಿಸಬಹುದೆಂದು ಸಭೆ ತನ್ನ ಅನುಮೋದನೆಯನ್ನು ನೀಡಿತು.**

**ವಿಷಯ ೧೦: ಅತ್ಯುತ್ತಮ ಫಲಿತಾಂಶ ಪಡೆದ ವಲಯ ಪಾಠಶಾಲೆಗಳಿಗೆ ಪುರಸ್ಕಾರ ನೀಡುವ ಬಗೆಗೆ.**

ಟಿಪ್ಪಣಿ: ೨೦೧೦–೧೧ನೇ ಸಾಲಿನಲ್ಲಿ ಪ್ರಥಮಾ, ಕಾವ್ಯ, ಸಾಹಿತ್ಯ ಪರೀಕ್ಷೆಗಳು ನಡೆದು ಫಲಿತಾಂಶಗಳು ಬಂದಿವೆ. ಬೆಳಗಾವಿ, ಮೈಸೂರು, ಬೆಂಗಳೂರು ಮತ್ತು ಗುಲಬರ್ಗಾ ವಲಯಗಳಲ್ಲಿ ಒಟ್ಟು ೨೮೦ ಅನುದಾನಸಹಿತ ಮತ್ತು ಅನುದಾನರಹಿತ ಪಾಠಶಾಲೆಗಳಿವೆ. ಈ ಪಾಠಶಾಲೆಗಳಿಗೆ ಉತ್ತೇಜನ ನೀಡಲು ಆಯಾ ವಲಯ ಮಟ್ಟಗಳಲ್ಲಿ ಉತ್ತಮ ಫಲಿತಾಂಶ ಪಡೆದಿರುವ ಪಾಠಶಾಲೆಗಳಿಗೆ ಪ್ರೋತ್ಸಾಹ ನೀಡುವುದು ಅಗತ್ಯವೆಂದು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು. ಪ್ರತಿಯೊಂದು ವಲಯಗಳಲ್ಲೂ ಪ್ರಥಮ, ದ್ವಿತೀಯ ಮತ್ತು ತೃತೀಯ ಶ್ರೇಣಿಯಲ್ಲಿ ಉತ್ತಮ ಫಲಿತಾಂಶ ಪಡೆದ ಪಾಠಶಾಲೆಗಳಿಗೆ ಪ್ರಮಾಣಪತ್ರ ಮತ್ತು ಸ್ಮರಣಿಕೆಯೊಂದನ್ನು ನೀಡಬಹುದೆಂದು ಸಭೆಯ ಸದಸ್ಯರು ಸೂಚಿಸಿದರು.

**ನಿರ್ಣಯ: ಮೇಲ್ಕಂಡ ಅಂಶಗಳಿಗೆ ಸಭೆಯು ಒಮ್ಮತದಿಂದ ತನ್ನ ಅನುಮೋದನೆಯನ್ನು ನೀಡಿತು.**

**ವಿಷಯ ೧೧: ಶ್ರೀ ಕಾಲಭೈರವೇಶ್ವರ ಸಂಸ್ಕೃತ–ವೇದ–ಆಗಮ ಮಹಾವಿದ್ಯಾಲಯಕ್ಕೆ ಜ್ಯೋತಿಷ, ಧರ್ಮಶಾಸ್ತ್ರ, ತರ್ಕಶಾಸ್ತ್ರ ಮತ್ತು ವ್ಯಾಕರಣಶಾಸ್ತ್ರಗಳನ್ನು ಅನುದಾನಸಹಿತವಾಗಿ ತರಗತಿಗಳನ್ನು ಪ್ರಾರಂಭಿಸುವ ಬಗೆಗೆ.**

ಟಿಪ್ಪಣಿ: ಶ್ರೀ ಕಾಲಭೈರವೇಶ್ವರ ಸಂಸ್ಕೃತ–ವೇದ–ಆಗಮ ಮಹಾವಿದ್ಯಾಲಯವು ಸರ್ಕಾರದ ವತಿಯಿಂದ ಶಾಶ್ವತ ಮಾನ್ಯತೆಗೆ ಒಳಪಟ್ಟಿದೆ. ಅಲ್ಲಿ ಅಲಂಕಾರ, ವೇದಾಂತ ಮತ್ತು ಇತರೆ ಶಾಸ್ತ್ರ ತರಗತಿಗಳು ನಡೆಯುತ್ತಿವೆ. ಇವುಗಳೊಡನೆ ಜ್ಯೋತಿಷ, ಧರ್ಮಶಾಸ್ತ್ರ, ತರ್ಕಶಾಸ್ತ್ರ ಮತ್ತು ವ್ಯಾಕರಣಶಾಸ್ತ್ರಗಳ ತರಗತಿಗಳನ್ನು ಪ್ರಾರಂಭಿಸಲು ಅನುಮೋದನೆ ನೀಡಬೇಕೆಂದು ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ (ರಿ.) ಅಧ್ಯಕ್ಷರಾದ ಪರಮಪೂಜ್ಯ ಶ್ರೀಗಳು ಕುಲಪತಿಗಳಿಗೆ ಬರೆದ ಪತ್ರವನ್ನು ಸಭೆಯು ಚರ್ಚಿಸಿತು. ಮೇಲ್ಕಂಡ ಶಾಸ್ತ್ರಗಳನ್ನು ೨೦೧೧–೧೨ನೇ ಸಾಲಿನಿಂದ ಪ್ರಾರಂಭಿಸಬಹುದಾದರೆ ಅನುದಾನರಹಿತವಾಗಿ ನಡೆಸಬಹುದೆಂದು, ಅನಂತರ ಅನುದಾನಸಹಿತವಾಗಿ ನಡೆಸಲು ಸೂಕ್ತವಾದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ವಿಶ್ವವಿದ್ಯಾಲಯದ ಮೂಲಕ ಕಳುಹಿಸಬಹುದೆಂದು ಸಭೆಯು ಪ್ರಸ್ತಾಪಿಸಿತು.

**ನಿರ್ಣಯ: ಈ ಮೇಲ್ಕಂಡ ಅಂಶಕ್ಕೆ ಸಭೆಯು ಒಮ್ಮತದಿಂದ ತನ್ನ ಅನುಮೋದನೆಯನ್ನು ನೀಡಿತು.**

**ವಿಷಯ ೧೨: ಎಲ್ಲಾ ಸಂಸ್ಕೃತ ಕಾಲೇಜುಗಳಲ್ಲಿ ಏಕರೂಪ ವೇಳಾಪಟ್ಟಿ ಮತ್ತು ಸಮಯ ನಿಗದೀಕರಣ ಜಾರಿಗೆ ತರುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಡಿಯಲ್ಲಿ ಮಾನ್ಯತೆ ಪಡೆದ ಕಾಲೇಜುಗಳಲ್ಲಿ ಶ್ರೀ ಕಾಲಭೈರವೇಶ್ವರ ಸಂಸ್ಕೃತ–ವೇದ–ಆಗಮ ಮಹಾವಿದ್ಯಾಲಯವನ್ನು ಹೊರತುಪಡಿಸಿ, ಉಳಿದ ಎಲ್ಲಾ ಕಾಲೇಜುಗಳಲ್ಲಿ ಬೇರೆ ಬೇರೆ ಸಮಯಗಳಲ್ಲಿ ಪರೀಕ್ಷೆಗಳು ನಡೆಯುತ್ತಿವೆ. ಸಾಂಪ್ರದಾಯಿಕವಾದ ಅನಧ್ಯಯನ ಪದ್ಧತಿ ಮುಂದುವರೆಯುತ್ತಿದೆ. ಆದರೆ ಪದವಿ ಕಾಲೇಜುಗಳಲ್ಲಿ ಇರುವಂತೆ ನಿರ್ದಿಷ್ಟವಾದ ವೇಳಾಪಟ್ಟಿ ಮತ್ತು ಸಮಯ ನಿಗದೀಕರಣ ಆಗುವುದು ಭವಿಷ್ಯದೃಷ್ಟಿಯಿಂದ ಸೂಕ್ತವೆಂದು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು. ಈ ಬಗೆಗೆ ವ್ಯಾಪಕವಾದ ಚರ್ಚೆ ಆಯಿತು. ನ್ಯಾಕ್ ಕಮಿಟಿಯ ಅಧ್ಯಕ್ಷರನ್ನು ಭೇಟಿ ಮಾಡಿ ಈ ಬಗೆಗೆ ವಿವರಗಳನ್ನು ಕುಲಸಚಿವರು ಪಡೆದು ಮುಂದಿನ ಸಭೆಯಲ್ಲಿ ಮಂಡಿಸಬಹುದೆಂದು ಸಭೆಯು ಸೂಚಿಸಿತು.

**ನಿರ್ಣಯ: ಮೇಲ್ಕಂಡ ಅಂಶಗಳಿಗೆ ಸಭೆಯು ಒಮ್ಮತದಿಂದ ತನ್ನ ಅನುಮೋದನೆಯನ್ನು ನೀಡಿತು.**

ಡಾ. ಚಂದ್ರಮೌಳಿ ಎಸ್. ನಾಯ್ಕರ
ಸದಸ್ಯ ಕಾರ್ಯದರ್ಶಿ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಅಧ್ಯಕ್ಷರು